**ದಿ: 16-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ ಎಸ್ ಡಿ ವಕೀಲರಿಂದ:**

1. ಪ್ರತಿವಾದಿಯರು ನಮ್ಮ ಹೊಲದಲ್ಲಿ ಬಿತ್ತುವುದಕ್ಕೆ ಬಿಡುತ್ತಿರಲಿಲ್ಲ ಮತ್ತು ಬೋರವೆಲ್ ಕೆಲಸ ಮಾಡಲು ಬಿಡುತ್ತಿರಲಿಲ್ಲ ಮತ್ತು ಕಿರಕಿರಿ ಮಾಡುತ್ತಾರೆ ಮತ್ತು ನಮ್ಮ ಹೊಲದಲ್ಲಿ ಬರಬಾರದೆಂದು ಈ ದಾವೆಯನ್ನು ಹಾಕಿರುತ್ತೇನೆ. ಈ ದಾವೆಯನ್ನು ಪ್ರತಿವಾದಿ 1 ರಿಂದ 6 ಇವರ ಮೇಲೆ ಸಲ್ಲಿಸಿದ್ದೇನೆ. ಪ್ರತಿವಾದಿ 1 ಮತ್ತು 4 ಇವರು ನನ್ನ ತಂದೆಯ ತಮ್ಮಂದಿರಾಗಬೇಕು ಮತ್ತು ನನಗೆ ಚಿಕ್ಕಪ್ಪಂದಿರಾಗಬೇಕು. ದಾವಾ ಜಮೀನಿನ ಸ ನಂ 77/1, ಅದರ ವಿಸ್ತೀರ್ಣ 02 ಎಕರೆ 08 ಗುಂಟೆ ಇದೆ. ದಾವಾ ಜಮೀನು ಮೊದಲು ನನ್ನ ತಂದೆ ಯಂಕೋಬ ಇವರ ಹೆಸರಿನಲ್ಲಿತ್ತು, ಸುಮಾರು 15 ವರ್ಷಗಳ ಹಿಂದೆ ನಮಗೆ ಭಾಗ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆ 15 ವರ್ಷಗಳ ಹಿಂದೆ ತಿರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತವಾಗಿರುವಾಗಲೇ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯವರ ನಡುವೆ ಭಾಗ ಆಗಿರುತ್ತದೆ.

2. ಸರ್ವೆ ನಂಬರ್ 77 ಭಾಗ ಆಗುವ ಪೂರ್ವದಲ್ಲಿ 06 ಎಕರೆ 25 ಗುಂಟೆ ಒಟ್ಟು ವಿಸ್ತೀರ್ಣದಲ್ಲಿತ್ತು. ಈ ವಿಭಾಗದಲ್ಲಿ ನನ್ನ ತಂದೆಗೆ 02 ಎಕರೆ 08 ಗುಂಟೆ, ನನ್ನ ಚಿಕ್ಕಪ್ಪನವರಾದ ಪ್ರತಿವಾದಿ 1 ಮತ್ತು 4 ಇವರಿಗೆ ತಲಾ 02-00 ಎಕರೆ ಯಂತೆ ಜಮೀನು ಬಂದಿರುತ್ತದೆ. ನನ್ನ ತಂದೆ ಯ ಭಾಗಕ್ಕೆ ಬಂದಿರುವ ಜಮೀನಿನಲ್ಲಿ ಕಲ್ಲು ಇರುವುದರಿಂದ ಜಾಸ್ತಿ ಜಮೀನು ಕೊಟ್ಟಿರುತ್ತಾರೆ. ಪಾಲು ವಿಭಾಗದಂತೆ ನನ್ನ ತಂದೆಯ ಹೆಸರಿಗೆ 02 ಎಕರೆ 08 ಗುಂಟೆ ಜಮೀನು ಮುಟೇಶನ್ ಆಗಿತ್ತು. ನನ್ನ ಚಿಕ್ಕಪ್ಪಂದರ ಮಕ್ಕಳಾದ ಮೌನೇಶ ಪ್ರತಿವಾದಿ 3 ಮತ್ತು ವೆಂಕಟೇಶ ಪ್ರತಿವಾದಿ 6 ಇವರ ಹೆಸರಿಗೆ ತಲಾ 02-00 ಎಕರೆ ಮುಟೇಶನ್ ಆಗಿದೆ. ಈ ದಾವೆಯಲ್ಲಿ ನನ್ನ ಹೆಸರಿಗೆ ಆದ ಮುಟೇಶನ್ ಹಾಜರುಪಡಿಸಿದ್ದೇನೆ. ನನ್ನ ತಂದೆ ತೀರಿಕೊಂಡ ಮೇಲೆ ನಾವು ಎಲ್ಲಾ ಅಣ್ಣ ತಮ್ಮಂದಿರು ಕುಳಿತು

ಮಾತನಾಡಿ ಭಾಗ ಮಾಡಿಕೊಂಡಿರುತ್ತೇವೆ. ನಿ ಪಿ 9 ರ ಕಂಪ್ಯೂ ಟರ್ ಮುಟೇಶನ್ ಪ್ರಕಾರ ನಿಮಗೆ 02 ಎಕರೆ 08 ಗುಂಟೆ, 3ನೇ ಪ್ರತಿವಾದಿಗೆ 02 ಎಕರೆ 07 ಗುಂಟೆ ಮತ್ತು 06 ನೇ ಪ್ರತಿವಾದಿಗೆ 02 ಎಕರೆ 07 ಗುಂಟೆ ಜಮೀನು ಬಂದಿರುತ್ತದೆ ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಸದರಿ ಸರ್ವೆನಂಬರನಲ್ಲಿ ಒಟ್ಟು 3 ಪಟ್ಟಿಗಳಾಗಿವೆ ಎಂದರೆ ಸರಿ. ದಾವಾ ಸರ್ವೆ ನಂಬರ್ ನಲ್ಲಿ ಕೆನಾಲ್ ಹಾದು ಹೋಗಿದೆ ಎಂದರೆ ಸರಿ. 03 ಜನರ ಜಮೀನಿನಲ್ಲಿ ನಾರಾಯಣಪುರ ಬಲದಂಡೆ ಕೆನಾಲ್ ಹಾದು ಹೋಗಿದೆ ಎಂದರೆ ಸರಿ. ನನ್ನ ತಂದೆ ಜೀವಂತ ಇರುವಾಗಲೇ ನಮ್ಮ ಜಮೀನಿನಲ್ಲಿ ಕೆನಾಲ್ ಹಾದು ಹೋಗಿದೆ, ಎಷ್ಟು ಎಕರೆ ಎಷ್ಟು ಗುಂಟೆ ಜಮೀನಿನಲ್ಲಿ ಕೆನಾಲ್ ಹಾದು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಆ ಕೆನಾಲ್ ಗೆ ರಸ್ತೆ ಇದೆ ಆ ರಸ್ತೆ 03 ಹಿಸ್ಸಾಗಳಿಗೆ ಹೋಗಿದೆ ಎಂದರೆ ಸರಿ. ಕೆನಾಲ್ ಗೆ ಯಾರ ಯಾರ ಜಮೀನಿನಲ್ಲಿ ಎಷ್ಟು ಎಷ್ಟು ಜಮೀನು ಹೋಗಿದೆ ಎಂದು ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ಕೆನಾಲ್ ಗೆ ಜಮೀನು ಹೋದ ಬಗ್ಗೆ ಪರಿಹಾರ ಹಣವನ್ನು ನಾವು 3 ಜನರು ಪಡೆದುಕೊಂಡಿದ್ದೇವೆಂದರೆ ಸರಿ.

3. ಕೆನಾಲ್ ಗೆ ಯಾರ ಜಮೀನು ಎಷ್ಟು ಭೂಸ್ವಾಧಿನವಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವೆ ಹಾಜರು ಮಾಡಿರುವಂತಹ ನಿ ಪಿ 13 ಕಂಪ್ಯೂ ಟರ್ ಪಹಣಿಯಲ್ಲಿ ಸ ನಂ 77/*/1 ಒಟ್ಟು 06 ಎಕರೆ 25 ಗುಂಟೆ ಪೈಕಿ ನಿಮ್ಮ ಹೆಸರಿಗೆ 02 ಎಕರೆ 08 ಗುಂಟೆ , ಪ್ರತಿವಾದಿ 3 ಮೌನೇಶನ ಹೆಸರಿಗೆ 02 ಎಕರೆ 07 ಗುಂಟೆ, ಪ್ರತಿವಾದಿ 6 ವೆಂಕಟೇಶ ನ ಹೆಸರಿಗೆ 01 ಎಕರೆ 10 ಗುಂಟೆ ಮತ್ತು ಅವರ ಜಮೀನಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ ಬೆಂಗಳೂರು ಇವರಿಗೆ ಭೂಸ್ವಾಧಿನವಾಗಿ 37 ಗುಂಟೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಪಹಣೀ ಮಾಡುವ ಕಾಲಕ್ಕೆ ಸಹಿಯನ್ನು ಮಾಡಿಲ್ಲ ಎನ್ನುತ್ತಾರೆ. ನಿ ಪಿ 13 ರ ಪಹಣಿಯಲ್ಲಿ ದಿನಾಂಕ: 24-02-2016 ರಂದು ಭೂಸ್ವಾಧೀನವಾಗಿದೆ ಎಂದು ನಮೂದು ಮಾಡಿದ್ದಾರೆಂದರೆ ಸರಿಯಲ್ಲ. ಕೆನಾಲ್ ಗೆ ನನ್ನ ಜಮೀನಿಂದ ಸುಮಾರು 7 ರಿಂದ 8 ಗುಂಟೆ ಜಮೀನು ಹೋಗಿದೆ. ಬಂದಿರುವ ಪರಿಹಾರ ಹಣದಲ್ಲಿ ನಾವು 3

ಜನರು ಸಮವಾಗಿ ಪಡೆದಿದ್ದೇವೆ. ಹಾಗಾಗಿ 3 ಜನರ ಜಮೀನಿನಲ್ಲಿ ಕೆನಾಲ್ ಸಮವಾಗಿ ಕಟ್ ಆಗಿದೆ ಎಂದರೆ ಸರಿ. ನಿಮ್ಮ ಜಮೀನಿನಲ್ಲಿ ಕೆನಾಲ್ ಹಾದು ಹೋಗಿರುವುದರಿಂದ ನೀವು 02 ಎಕರೆ 08 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ಉಳಿದಿರುವ ಜಮೀನು ನನ್ನ ಸ್ವಾಧೀನದಲ್ಲಿದೆ ಎನ್ನುತ್ತಾರೆ. ಈ ದಾವೆಯನ್ನು ಒಟ್ಟು 02 ಎಕರೆ 08 ಗುಂಟೆ ಜಮೀನಿನ ಮೇಲೆ ಹಾಕಿದ್ದೀರೋ ನಿಮ್ಮ ಕಬ್ಜಾದಲ್ಲಿರುವ ಉಳಿದ ಜಮೀನಿನ ಮೇಲೆ ಹಾಕಿದ್ದೀರೋ ಎಂದರೆ ಸಾಕ್ಷಿಯು ಪಹಣಿಯಲ್ಲಿರುವ ನನ್ನ ಹೆಸರಿಗಿರುವ 02 ಎಕರೆ 08 ಗುಂಟೆ ಜಮೀನಿನ ಮೇಲೆ ಹಾಕಿದ್ದೇನೆ ಎನ್ನುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)**

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ